ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ

ದಿನಾಂಕ : DATE : 19/07/2019

# ಜನಪದ ಸಿರಿ ಹುಚ್ಚಪ್ಪ ಮಾಸ್ತರ್ ನಿಧನ

ವಿಕ ಸುದ್ದಿಲೋಕ ಸಾಗರ (ಶಿವಮೊಗ್ಗ)



ಮಲೆನಾಡಿನ ಜನಪದ ಕಲೆ ಸಾಹಿತ್ಯ ಮತ್ತು ಸಂಸ್ಕೃತಿಗಳ ಸಮರ್ಥ ಅಧ್ಯಯನದ ಹಿರಿಯ ಚೇತನ, ನಗರದ ಮಂಕಳಲೆ ರಸ್ತೆ ವಾಸಿ ಎನ್. ಹುಚ್ಚಪ್ಪ ಮಾಸ್ತರ್(82) ಬುಧವಾರ ಮಧ್ಯರಾತ್ರಿ ನಿಧನ ಹೊಂದಿದರು.

ಅವರಿಗೆ ಪಕ ಚಿತ್ರ ಕಲಾವಿದೆ, ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಪತ್ನಿ ಗೌರಮ್ಮ, ಮೂವರು ಪುತ್ರರು, ಸಾಮಾಜಿಕ ಹೋರಾಟಗಾರ ಸಹೋದರ ಕುಗ್ವೆ ಶಿವಾನಂದ ಹಾಗೂ ಒಬ್ಬ ಸಹೋದರಿ ಇದ್ದಾರೆ.

**ಸ್ಥಾನ, ಪ್ರಶಸ್ತಿ:** ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಎರಡು ಅವಧಿಗೆ ಸದಸ್ಯರಾಗಿ ಹುಚ್ಚಪ್ಪ ಮಾಸ್ತರ್ ಸೇವೆ ಸಲ್ಲಿಸಿದ್ದರು. ಅವರಿಗೆ 1991ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2017ರಲ್ಲಿ ಡಾ. ಜೀ.ಶಂ.ಪ ಪ್ರಶಸ್ತಿ, ವ್ಯ ಪಯವಾಹಿನಿ ಜನಮನ ಹೊಸಬಾಳೆ ಜಿ.ಅನಂತಪ್ಪ ಸೇವಾ ಪ್ರಶಸ್ತಿ ಮುಂತಾದವುಗಳು ಲಭಿಸಿವೆ.

**ಜಾನಪದ ಜಗತ್ತಿನ ದೊಡ್ಡ ಮನುಷ್ಯ ಹುಚ್ಚಪ್ಪ ಮಾಸ್ತರ್. ಅವರ ಸಾವು ನನಗೆ ಅತ್ಯಂತ ದುಃಖ ತಂದಿದೆ. ನನ್ನ ಆತ್ಮೀಯ ಸ್ನೇಹಿತ ಆತ. ಮಲೆನಾಡಿನ ಜಾನಪದದ ವಿಶೇಷ ಸಂಗತಿಗಳನ್ನು ನನ್ನಂಥವನಿಗೆ ಪರಿಚಯಿಸಿದ್ದೇ ಹುಚ್ಚಪ್ಪ.**

**-ಡಾ.ಚಂದ್ರಶೇಖರ ಕಂಬಾರ**